ಸಂವಾದಿ ಕಾವ್ಯ


# ಕವಿತೆ ಹುಟ್ಟುವ ಗಳಿಗೆ



**ಶಿವರಾಜ ಬೆಟ್ಟದೂರು**

ಕಲೆ: ಜಬೀವುಲ್ಲಾ ಎಂ. ಅಸದ್

ಬಿತ್ತುವ ಬೀಜ ಒಂದೇ ಆದರೂ, ಮಣ್ಣಿನ ಗುಣಕ್ಕೆ ತಕ್ಕಂತೆ ಫಲ ದೊರೆಯುವುದು. ಈ 'ಬೀಜ–ಫಲ ನ್ಯಾಯ' ಕಾವ್ಯಕ್ಕೂ ಹೊಂದುವಂತಹದ್ದು. ಯಾವುದೋ ಭಾಷೆಯ ಅಥವಾ ತನ್ನದೇ ಭಾಷೆಯ ಕವಿತೆಯೊಂದು, ಮತ್ತೊಬ್ಬ ಕವಿಯಲ್ಲಿ ಹೊಸಹುಟ್ಟು ಪಡೆದು ಸ್ವತಂತ್ರ ಕವಿತೆಯಾಗಿ ಅರಳಬಹುದು. ಈ ಕಾವ್ಯ ಸೋಜಿಗದ ಕುರಿತು ಕವಿಯೊಬ್ಬರ ಅನುಭವದ ಟಿಪ್ಪಣಿಗಳು.



ಕವಿತೆ ಹುಟ್ಟುವ ಗಳಿಗೆ ಯಾವತ್ತೂ ಸೋಜಿಗ. ಅದು ಯಾವಾಗ, ಹೇಗೆ, ಎಲ್ಲಿ, ಧುತ್ತೆಂದು ಕೈ ಹಿಡಿದು ಬರೆಸುತ್ತದೋ ಗೊತ್ತಿಲ್ಲ. ಯಾವುದೋ ಹೊಳವು, ಯಾವುದೋ ಒಂದು ಸಾಲು ಥಟ್ಟನೆ ನಿಲ್ಲಿಸಿ ಬಿಡಬಹುದು. ಯಾವುದೋ ಕವಿತೆಯನ್ನು ಓದಿದಾಗ, 'ಇದು ಹೀಗಲ್ಲ' ಎಂದೂ ಅನ್ನಿಸಬಹುದು. 'ಬೇರೇನೋ ಆಗಬೇಕಿತ್ತು' ಅನ್ನಿಸಬಹುದು. ಅದು ನಮ್ಮ ಭಾಷೆಯ ಯಾವುದೋ ಕವಿಯ ಕವಿತೆ, ಅನ್ಯಭಾಷೆಯ ಕವಿತೆ, ಅನುವಾದಗೊಂಡು ಕಣ್ಣಿಗೆ ಬಿದ್ದ ಕವಿತೆ ಆಗಿದ್ದ ಸಂದರ್ಭದಲ್ಲೂ, ಆ ರಚನೆಯನ್ನು ಕವಿಯಾದವನು ಮರುಸೃಷ್ಟಿಸಲು ಯತ್ನಿಸಿದ ಉದಾಹರಣೆಗಳಿವೆ. ಅಂಥ ಪ್ರಯತ್ನಗಳು ಸ್ವತಂತ್ರ ಕವಿತೆಗಳಾಗಿ ಉಳಿದ ನಿದರ್ಶನಗಳೂ ಉಂಟು. ಹಾಂ, ತುಸು ಎಚ್ಚರ ತಪ್ಪಿದರೆ, ಢಾಳುಢಾಳಾಗಿ ಕಾಪಿ ಹೊಡೆದಂತೆ ಅನ್ನಿಸಬಹುದು. ಒಬ್ಬ ಕವಿ ತನ್ನ ಜೀವಮಾನದಲ್ಲಿ ಎಷ್ಟೊಂದು ಕವಿತೆಗಳಿಂದ ಪ್ರೇರಣೆಗೊಂಡಿರಲಿಕ್ಕಿಲ್ಲ! ಎಲ್ಲಾ ಕಾಲದ, ಎಲ್ಲ ಕವಿಗಳಿಗೂ ಇಂತಹ ಅನುಭವಗಳಾಗಿರುತ್ತವೆ. ಒಡೆದು ಹೇಳುವವರು ವಿರಳವಷ್ಟೇ.

ಇಂದಿನ ಇಂಟರ್ನೆಟ್ ಯುಗದಲ್ಲಿ ವಿವಿಧ ಮೂಲಗಳಿಂದ ಏನೆಲ್ಲವನ್ನೂ ಪಡೆವ ಸಾಧ್ಯತೆಗಳಿವೆ. ಈ ಸಾಧ್ಯತೆ ಸಾಹಿತ್ಯಾಭ್ಯಾಸಿಗಳಿಗೆ ವರದಾನ. ಬೇರೆ ಬೇರೆ ಭಾಷೆಗಳ ಕವಿತೆಯನ್ನು ಹುಡುಕಿ ಅನುಭವಿಸಲು ಅಂತರ್ಜಾಲ